ಊ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಿಂದುಳಿದ ವರ್ಗ, ದೈಹಿಕವಾಗಿ ಹಾಗೂ ಆರ್ಥಿಕವಾಗಿ ಸವಾಲು ಹೊಂದಿರುವ ಅತ್ಯಂತ ಹಿಂದುಳಿದ ತಾಲ್ಲೋಕುಗಳ ಅಭ್ಯರ್ಥಿಗಳಿಗೆ ಕಂಪ್ಯೂಟರ್ ತರಬೇತಿ ನೀಡುವ ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ.

ಋ. ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ, ಪಾರ್ಕ್‌ನ ನಿರ್ವಹಣೆಗಾಗಿ

ೠ. SC/ST ವಿದ್ಯಾರ್ಥಿಗಳಿಗೆ IBM Main frame ತರಬೇತಿ ನೀಡಲಾಗಿರುತ್ತದೆ.

ಎ. ಐಟಿಐಆರ್ ಯೋಜನೆಯಡಿಪಿಆರ್ ತಯಾರಿಸಲಾಗಿರುತ್ತದೆ.

ಏ. ಶಿವಮೊಗ್ಗ ಮತ್ತು ಗುಲ್ಬರ್ಗದ ಐಟಿ ಪಾರ್ಕನಲ್ಲಿ ಇನ್ ಕ್ಯೂಬೇಷನ್ ಫೆಸಿಲಿಟಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಐ. ಹುಬ್ಬಳ್ಳಿಯ ಐಟಿ ಪಾರ್ಕ್‌ನ ನವೀಕರಣ, ಸ್ಯಾನಿಟರಿ ಮತ್ತು ನೀರು ಸರಬರಾಜು ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಉ) ಕಿಯಾನಿಕ್ಸ್‌ನ ನೇಮಕಾತಿ ವೃಂದದಡಿಯಲ್ಲಿ ಕಿಯಾನಿಕ್ಸ್ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅವರುಗಳ ಮೇಲ್ವಿಚಾರಣೆಯಲ್ಲಿ ಮೇಲೆ ತಿಳಿಸಿರುವ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು

2746 (3175); ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)

ಅ) ರಾಜ್ಯದಲ್ಲಿರುವ ಒಟ್ಟು ಸಾರ್ವಜನಿಕ ಮತ್ತು ಖಾಸಗಿ ಆಸ್ಪತ್ರೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯದ ಬಹಳಷ್ಟು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಪಡೆದು ಪದವಿ ಪ್ರಮಾಣ ಪತ್ರದೊಂದಿಗೆ ಹೊರಬರುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು;

ಈ) ಈ ವೈದ್ಯರುಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ ಎರಡು ವರ್ಷಗಳಲ್ಲಿ ಸೇವೆಯನ್ನು ಕಡ್ಡಾಯಗೊಳಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ ಸರ್ಕಾರ ಈ ಪ್ರಸ್ತಾವನೆಯನ್ನು ಜಾರಿಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ ಒಟ್ಟು 2632 ಸಾರ್ವಜನಿಕ ಮತ್ತು ಖಾಸಗಿ ಆಸ್ಪತ್ರೆಗಳು ಜಿಲ್ಲಾವಾರು ವಿವರವನ್ನು ಅನುಬಂಧ–1ದಲ್ಲಿ ನೀಡಲಾಗಿದೆ.

ಆ) ಬಂದಿದೆ.

ಇ) ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ ವ್ಯಾಸಂಗ ಪಡೆದು ಪದವಿ ಪ್ರಮಾಣ ಪತ್ರದೊಂದಿಗೆ ಹೊರಬರುತ್ತಿರುವ ವೈದ್ಯರುಗಳ ಸಂಖ್ಯೆ: ಅನುಬಂಧ–2

ಈ) ಇಲ್ಲ

ಎಂ.ಬಿ.ಬಿ.ಎಸ್. ವ್ಯಾಸಂಗ ಪೂರೈಸಿರುವರಿಗೆ ಗ್ರಾಮೀಣ ಪ್ರದೇಶದಲ್ಲಿ ಒಂದು ವರ್ಷ ಕಡ್ಡಾಯ ಸೇವೆ ಸಲ್ಲಿಸಲು ನಿಯಮವನ್ನು ರೂಪಿಸಲಾಗಿದೆ ಹಾಗೂ ಸ್ನಾತಕೋತ್ತರ ವ್ಯಾಸಂಗ ಪೂರೈಸಿರುವರಿಗೆ ಗ್ರಾಮೀಣ ಪ್ರದೇಶದಲ್ಲಿ ಮೂರು ವರ್ಷ ಕಡ್ಡಾಯ ಸೇವೆ ಸಲ್ಲಿಸಲು ನಿಯಮವನ್ನು ರೂಪಿಸಲಾಗಿದೆ.

ಉ) ಅನ್ವಯಿಸುವುದಿಲ್ಲ.

ಅನುಬಂಧ –I

ಪ್ರಶ್ನೆ ಸಂಖ್ಯೆ: 3175

ಅನುಬಂಧ-I

ಕರ್ನಾಟಕ ರಾಜ್ಯದಲ್ಲಿ ಕೆ.ಪಿ.ಎಂ.ಇ ಆಕ್ಟ್ ಅಡಿಯಲ್ಲಿ ನೊಂದಣಿಯಾಗಿರುವ ಆಸ್ಪತ್ರೆಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಆಸ್ಪತ್ರೆಗಳ ಸಂಖ್ಯೆ
1	ಬೆಂಗಳೂರು ನಗರ	471
2	ಬೆಂಗಳೂರು ಗ್ರಾಮಾಂತರ	43
3	ಚಿತ್ರದುರ್ಗ	36
4	ದಾವಣಗೆರೆ	84
5	ಕೋಲಾರ	72
6	ಶಿವಮೊಗ್ಗ	92
7	ತುಮಕೂರು	99
8	ರಾಮನಗರ	23
9	ಚಿಕ್ಕಬಳ್ಳಾಪುರ	32
10	ಮೈಸೂರು	106
11	ಮಂಡ್ಯ	41
12	ದಕ್ಷಿಣ ಕನ್ನಡ	111
13	ಉಡುಪಿ	47
14	ಹಾಸನ	39
15	ಚಿಕ್ಕಮಗಳೂರು	33
16	ಚಾಮರಾಜನಗರ	21
17	ಕೊಡಗು	16
18	ಬೆಳಗಾಂ	259
19	ಬಾಗಲಕೋಟೆ	82
20	ಬಿಜಾಪುರ	77
21	ಧಾರವಾಡ	164
22	ಗದಗ	50
23	ಹಾವೇರಿ	67
24	ಉತ್ತರ ಕನ್ನಡ	70
25	ಯಾದಗಿರಿ	13
26	ಗುಲ್ಬರ್ಗಾ	117
27	ಬೀದರ್	60
28	ಕೊಪ್ಪಳ	12
29	ರಾಯಚೂರು	58
30	ಬಳ್ಳಾರಿ	88
	ಒಟ್ಟು	2483

ಅನುಬಂಧ-2 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3175

Passed out strength of PG/Diploma for the year May'2014 and Oct'2014 examination

Slno	TYPE OF COLLEGES	COURSE	EXAM		PASSED STRENGTH
			May-2014	Oct-2014	Total
1	GOVERNMENT	PG DIP	146	0	146
		PG MD/MS	340	49	389
2	PRIVATE	PG DIP	205	0	205
		PG MD/MS	744	89	833
				Grand Total	1573

Passed out strength of MBBS course for the year May'2014 and Oct'2014 examination

Slno	TYPE OF COLLEGES	COURSE	EXAM		PASSED STRENGTH
			Apr-2013	Oct-2013	Total
1	GOVERNMENT		878	126	1004
2	PRIVATE		1781	691	2472
				Grand Total	3476

18/3/15